**<u>ದಿನಾಂಕಃ 15/02/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಬಿ.ಜಿ.ಎಸ್. ವಕೀಲರಿಂದಃ</u>**

1. ನಾನು ದೇವಮ್ಮರವರ ಪರವಾಗಿ ಸಾಕ್ಷಿ ಹೇಳಲು ಬಂದಿದ್ದೇನೆ. ದೇವಮ್ಮರವರು ಆರೋಗ್ಯವಾಗಿದ್ದಾರೆ ಎಂದರೆ ಸರಿಯಲ್ಲ. ದೇವಮ್ಮರವರಿಗೆ ಕಿವಿ ಕೇಳಿಸುವುದಿಲ್ಲ ಹಾಗೂ ಓಡಾಡಲು ಸಾಧ್ಯವಿಲ್ಲ. ನಿಪಿ.1 ರಲ್ಲಿ ದೇವಮ್ಮರವರಿಗೆ ಕಿವಿ ಕೇಳಿಸುವುದಿಲ್ಲ ಹಾಗೂ ಓಡಾಡಲು ತೊಂದರೆ ಇದೆ ಎಂದು ಹೇಳಿ ಬರೆಸಿಲ್ಲ. ನನ್ನ ತಾಯಿ ದೇವಮ್ಮರವರಿಗೆ ಮದುವೆಯಾಗಿ ಸುಮಾರು 55 ವರ್ಷ ಆಗಿದೆ. ಈ ದಾವೆಯನ್ನು ಹೂಡುವ ಕಾಲಕ್ಕೆ ನನ್ನ ತಾಯಿಗೆ 50 ವರ್ಷ ವಯಸ್ಸಾಗಿತ್ತು. ನನ್ನ ತಾಯಿ ಕೆರೆಮೇಗಳ ಕೊಪ್ಪಲು ಗ್ರಾಮದಲ್ಲಿ ವಾಸವಾಗಿದ್ದಾರೆ. ದಾವಾ ಆಸ್ತಿಗೆ ನಾನು ಜಂಟಿ ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. ಜವರೇಗೌಡರವರು ನನಗೆ ತಾತನಾಗಬೇಕು. ಅವರಿಗೆ ನಂಜೇಗೌಡ, ದೇವಮ್ಮ, ಸಾಕಮ್ಮ, ಲಕ್ಷ್ಮಮ್ಮ ಮತ್ತು ಸರೋಜಮ್ಮ ಎಂಬ 5 ಜನ ಮಕ್ಕಳು. 4 ನೇ ಪ್ರತಿವಾದಿ ಜವರೇಗೌಡರವರಿಗೆ ಮೊಮ್ಮಗಳಾಗಬೇಕು. 6 ನೇ ಪ್ರತಿವಾದಿ ಜವರೇಗೌಡರವರಿಗೆ ಮಗಳಾಗಬೇಕು.

2. ಈ ಕೇಸಿನ ವಿದ್ಯಾಮಾನಗಳನ್ನು ತಿಳಿದುಕೊಂಡು ಸಾಕ್ಷಿ ಹೇಳಲು ಬಂದಿದ್ದೇನೆ. ಲಕ್ಷ್ಮಮ್ಮ 5 ನೇ ಪ್ರತಿವಾದಿಯ ತಾಯಿ. ಲಕ್ಷ್ಮಮ್ಮರವರ ಗಂಡನ ಹೆಸರು ನನಗೆ ಗೊತ್ತಿಲ್ಲ. 6 ನೇ ಪ್ರತಿವಾದಿಗೆ ಮದುವೆಯಾಗಿಲ್ಲ, ಅವರು ಜೀವಂತ ಇದ್ದಾರೆ. ದಾವಾಸ್ವತ್ತಿನಲ್ಲಿ ನನ್ನ ತಾಯಿ ವ್ಯವಸಾಯ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ನಾನು ವ್ಯವಸಾಯ ಮಾಡುತ್ತಿದ್ದೇನೆ ಎಂದು ತೋರಿಸಲು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ. ದಾವಾಸ್ವತ್ತಿನ ಐಟಂ–1 ರ ಖಾತೆ 7 ನೇ ಪ್ರತಿವಾದಿ–ಕೃಷ್ಣೇಗೌಡರವರ ಹೆಸರಿನಲ್ಲಿದೆ. ದಾವಾಸ್ವತ್ತುಗಳನ್ನು ಬಿಟ್ಟು ಒಟ್ಟು ಕುಟುಂಬದಲ್ಲಿ ಬೇರೆ ಆಸ್ತಿಗಳು ಇಲ್ಲ. ಪ್ರತಿವಾದಿ 1 ರಿಂದ 5 ರವರು ಬೇರೆ ಬೇರೆ ಮನೆಗಳಲ್ಲಿ ವಾಸವಿದ್ದಾರೆ. ಪ್ರತಿವಾದಿ 2 ಮತ್ತು 5 ರವರು ಬಾಡಿಗೆ ಮನೆಯಲ್ಲಿ ವಾಸವಿದ್ದಾರೆ. ಆ ಮನೆಯ ಮಾಲೀಕರ ಹೆಸರು ಗೊತ್ತಿಲ್ಲ.

3. ದಾವೆಯನ್ನು ಸರ್ವೆ ನಂಬರ್ 71ಕ್ಕೆ ಸಂಬಂದಪಟ್ಟಂತೆ ಹಾಕಿದ್ದೇನೆ. ಅದರ ಒಟ್ಟು ವಿಸ್ತೀರ್ಣ 3 ಎಕರೆ 13 ಗುಂಟೆ ಇರುತ್ತದೆ. ಅದರ ಚಕ್ಕುಬಂದಿಃ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಜವರಲಿಂಗೇಗೌಡರ ಜಮೀನು, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಕೃಷ್ಣೇಗೌಡರ ಜಮೀನು. ಈಗ ಹೇಳಿದಂತಹ ಚಕ್ಕುಬಂದಿಗೆ ನಾನು ದಾವೆಯನ್ನು ಹೂಡಿದ್ದೇನೆ. ದಾವಾಆಸ್ತಿಯು ನನ್ನ ತಾಯಿಯ ಅಜ್ಜಿ ಅಕ್ಕಯ್ಯಮ್ಮ ರವರಿಗೆ ಸೇರಿದ್ದು. ಅಕ್ಕಯ್ಯಮ್ಮರವರಿಗೆ ಸೇರಿದ ಆಸ್ತಿ ಎಂದು ತೋರಿಸಲು ನ್ಯಾಯಾಲಯಕ್ಕೆ ಪಹಣಿಯನ್ನು ನೀಡಿದ್ದೇನೆ. ಅಕ್ಕಯ್ಯಮ್ಮರವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ಅಕ್ಕಯ್ಯಮ್ಮ ರವರಿಗೆ ಜವರೇಗೌಡರವರಿಗೆ ಆಸ್ತಿ ಬಂದಿರುತ್ತದೆ. ಜವರೇಗೌಡರವರಿಗೆ ಆಸ್ತಿಯಲ್ಲಿ ಸಂಪೂರ್ಣ ಹಕ್ಕು ಇದೆ ಎಂದರೆ ಸರಿ. ಜವರೇಗೌಡರವರಿಗೆ ಆಸ್ತಿಯಲ್ಲಿ ಸಂಪೂರ್ಣ ಹಕ್ಕು ಇರುವ ಕಾರಣ ಅವರು ಸದರಿ ಆಸ್ತಿಯನ್ನು ಮಾರಾಟ ಅಥವಾ ಪರಭಾರೆ ಮಾಡುವುದಕ್ಕೆ ಹಕ್ಕುಳ್ಳವರಾಗಿದ್ದಾರೆ ಎಂದರೆ ಸರಿಯಲ್ಲ. ಚನ್ನೇಗೌಡರ ಮಗ ಜವರೇಗೌಡ, ಜವರೇಗೌಡರ ಪತ್ನಿ ಪುಟ್ಟಮ್ಮ, ಜವರೇಗೌಡರ ಮಗ ನಂಜೇಗೌಡ, ನಂಜೇಗೌಡರ ಪತ್ನಿ ಸುಂದರಮ್ಮ ಮತ್ತು ಇವರ ಮಕ್ಕಳಾದ ಪ್ರತಿವಾದಿ 2, 3 ಮತ್ತು 6 ರವರು ಸೇರಿ ಕೃಷ್ಣೇಗೌಡರ ಹೆಸರಿಗೆ ಕ್ರಯಪತ್ರ ಬರೆದುಕೊಟ್ಟಿದ್ದಾರೆ ಎಂದರೆ ನಿಜ. ಖಾತೆ ಕೃಷ್ಣೇಗೌಡರ ಹೆಸರಿನಲ್ಲಿದೆ ಎಂದರೆ ಸರಿ. ಆದರೆ ಅವರು ಸ್ವಾಧೀನದಲ್ಲಿಲ್ಲ. ನಿಪಿ.12ರ ಕಲಂ ನಂಬರ್ 9 ರಲ್ಲಿ ಕೃಷ್ಣೇಗೌಡರ ಹೆಸರಿದೆ ಎಂದರೆ ನಿಜ.

(ಮುಂದುವರೆದ ಪಾಟೀಸವಾಲನ್ನು ಪ್ರತಿವಾದಿಯ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು)

**<u>ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು</u>**

**<u>ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.</u>**

**ಹೆಚ್.ಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**

**ಪಿರಿಯಾಪಟ್ಟಣ.**